**ಓಎಸ್ : 753/2006 ಪಿಡಬ್ಲ್ಯೂ:1**

**ಸಾಕ್ಷಿಯನ್ನು ದಿಃ 17.11.2018 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 14 ಮತ್ತು 15 ರ ಪರ ಶ್ರೀ ಎಸ್.ಎಸ್ ವಕೀಲರಿಂದಃ**

ನನ್ನ ತಂದೆಯ ತಂದೆ ಹೆಸರು ಡೊಳ್ಳಯ್ಯ. ಅವರಿಗೆ ಮೂರು ಮಕ್ಕಳು. ಅದರಲ್ಲಿ ನನ್ನ ತಂದೆ ತಿಮ್ಮಯ್ಯ. ನನ್ನ ತಾಯಿಯ ಹೆಸರು ಚಿಕ್ಕಅಣ್ಣಮ್ಮ. ನಾನು ಚಿಕ್ಕವಳಿದ್ದಾಗಲೇ ನನ್ನ ತಂದೆ ಮತ್ತು ತಾಯಿ ಅವರು ತೀರಿಕೊಂಡಿದ್ದರು. ನನ್ನ ತಂದೆ ಮತ್ತು ತಾಯಿಯ ಮರಣ ಪ್ರಮಾಣ ಪತ್ರ ಇರುವುದಿಲ್ಲ . ನಾನು ಯಾವುದೇ ವಿದ್ಯಾಭ್ಯಾಸ ಮಾಡಿಲ್ಲ. ಪ್ರತಿವಾದಿ 1 ರಿಂದ 3 ಅವಿದ್ಯಾವಂತರು. ನಾನು ಸರ್ವೇ ನಂ. 13, 18, 24 ರ ಜಮೀನಿಗೆ ಮತ್ತು ಮನೆ ಭಾಗ ಬರಬೇಕು ಎಂದು ಈ ದಾವೆ ಹಾಕಿರುತ್ತೇನೆ. ಸರ್ವೇ ನಂಬರ್ 13 ಮೂರು ಎಕರೆ ಇದೆ. ಉಳಿದ ಸರ್ವೇ ನಂಬರ್ ವಿಸ್ತೀರ್ಣ ಗೊತ್ತಿಲ್ಲ. ಈ ದಾವೆಗೆ ಮಾಹಿತಿ ನಾನೇ ಕೊಟ್ಟೆ. ದಾವಾ ಆಸ್ತಿಯ ಜಮೀನು ಆರ್.ಟಿ.ಸಿ ನೋಡಿರುತ್ತೇನೆ. ನಿಪಿ. 1 ಮೂಲ ಪ್ರತಿ ವಕೀಲರಿಗೆ ಕೊಟ್ಟಿರುತ್ತೇನೆ. ಅದನ್ನು ಹಾಜರು ಮಾಡಲು ತೊಂದರೆ ಇಲ್ಲ. ದಾನ ಪತ್ರ ಯಾರು ಬರೆದಿರುತ್ತಾರೆ ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ಗೊತ್ತು. ನಾನು ಚಿಕ್ಕವಳಿದ್ದಾಗ ನಮ್ಮ ತಾಯಿಯವರು ಮರಣ ಹೊಂದುವ ಮೊದಲು ದಾನ ಪತ್ರ ಬರೆದಿರುತ್ತಾರೆ. ನಮ್ಮ ತಾಯಿಗೆ ಆ ಸಮಯದಲ್ಲಿ ಸದರಿ ಜಮೀನು ಖಾತೆ ಆಗಿರಲಿಲ್ಲ ಎಂದರೆ ಗೊತ್ತಿಲ್ಲ. ನಮ್ಮ ತಾಯಿಗೆ ದಾನಪತ್ರ ಬರೆಯಲು ಹಕ್ಕು ಇರಲಿಲ್ಲ ಎಂದರೆ ಗೊತ್ತಿಲ್ಲ. ಸರ್ವೇ ನಂ. 13/1 ರಲ್ಲಿ ನನ್ನ ತಂದೆಯ ಭಾಗಕ್ಕೆ 4 ಎಕರೆ ಇದೆ. ಆದರೆ ವಾದ ಪತ್ರದಲ್ಲಿ 21 ಗುಂಟೆ ಎಂದು ಬರೆದಿರುತ್ತಾರೆ. ದಾನ ಪತ್ರ ಮತ್ತು ವಾದ ಪತ್ರಕ್ಕೆ ತಾಳೆ ಇಲ್ಲ ಎಂದರೆ ಗೊತ್ತಿಲ್ಲ. ನಾನು ಮತ್ತು ನನ್ನ ತಾಯಿ ಸೇರಿ ನಿಪಿ. 1 ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಕೊಕ್ಕರೆ ಹುಂಡಿ ಶ್ರೀರಂಗಪಟ್ಟಣದಲ್ಲಿ ವಾಸವಿರುತ್ತೇನೆ. ಯಾಂದಳ್ಳಿಯಿಂದ ನಮ್ಮ ಊರು 3 ಕಿ.ಮೀ. ಇರುತ್ತದೆ.

ಕರೀಗೌಡ ಮತ್ತು ಗೌಡಯ್ಯ ನಮ್ಮ ಚಿಕ್ಕಪ್ಪಂದಿರು. ಈಗ ಮೃತ ಪಟ್ಟಿರುತ್ತಾರೆ. ನನ್ನ ತಂದೆ ಮತ್ತು ಚಿಕ್ಕಪ್ಪಂದಿರು ಬಾಯಿ ಮಾತಿನಲ್ಲಿ ಭಾಗ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಆ ಪ್ರಕಾರ ನಮ್ಮ ತಂದೆಗೆ ಸರ್ವೇ ನಂ. **24/1** ರಲ್ಲಿ **1** ಎಕರೆ **37** ಗುಂಟೆ ಮತ್ತು ಸರ್ವೇ ನಂ. **25/1** ರಲ್ಲಿ **1** ಎಕರೆ ಬಂದಿದೆ ಎಂದರೆ ಗೊತ್ತಿಲ್ಲ. ಅದೇ ರೀತಿ ಸರ್ವೇ ನಂ. **13/1** ರಲ್ಲಿ **1** ಎಕರೆ **22** ಗುಂಟೆ, ಸರ್ವೇ ನಂ. **13/2** ರಲ್ಲಿ **1** ಎಕರೆ **28** ಗುಂಟೆ, ಸರ್ವೇ ನಂ. **24/3** ರಲ್ಲಿ **2** ಎಕರೆ **07** ಗುಂಟೆ, ಸರ್ವೇ ನಂ. **25/3** ರಲ್ಲಿ **1** ಎಕರೆ **6** ಗುಂಟೆ ಗೌಡಯ್ಯನಿಗೆ ಬಂದಿತ್ತು ಎಂದರೆ ಗೊತ್ತಿಲ್ಲ. ಅದೇ ರೀತಿ ಸರ್ವೇ ನಂ. **13/2** ರಲ್ಲಿ **13** ಗುಂಟೆ, ಸರ್ವೇ ನಂ. **18/1** ರಲ್ಲಿ **2** ಎಕರೆ **16** ಗುಂಟೆ ಕರಿಗೌಡನಿಗೆ ಬಂದಿತ್ತು ಎಂದರೆ ಗೊತ್ತಿಲ್ಲ. ನಮ್ಮ ತಂದೆ ಪಾಲಿಗೆ ಬಂದ ಆಸ್ತಿಯನ್ನು ನಾವು ನಾಲ್ಕು ಜನ ಹೆಣ್ಣು ಮಕ್ಕಳು ಭಾಗ ಮಾಡಿಕೊಂಡಿದ್ದೇವೆ ಎಂದರೆ ನಿಜ. ಆ ಪ್ರಕಾರ ಸರ್ವೇ ನಂ. **24/1** ರಲ್ಲಿ **30** ಗುಂಟೆ **1** ನೇ ಪ್ರತಿವಾದಿಗೆ ಬಂದಿದೆ, ಸರ್ವೇ ನಂ. **24/1** ರಲ್ಲಿ **30** ಗುಂಟೆ **2** ನೇ ಪ್ರತಿವಾದಿಗೆ, ಸರ್ವೇ ನಂ. **24/1** ರಲ್ಲಿ **17** ಗುಂಟೆ, **25/1** ರಲ್ಲಿ **12** ಗುಂಟೆ **3** ನೇ ಪ್ರತಿವಾದಿಗೆ ಬಂದಿದೆ. ಸರ್ವೇ ನಂ. **25/1** ರಲ್ಲಿ **28** ಗುಂಟೆ ನನಗೆ ಬಂದಿದೆ ಎಂದರೆ ನಿಜ. ಆ ಪ್ರಕಾರ ಅವರವರ ಹೆಸರಿಗೆ ಖಾತೆಯಾಗಿದೆ. **1** ನೇ ಪ್ರತಿವಾದಿ ತನ್ನ ಪಾಲನ್ನು **2** ನೇ ಪ್ರತಿವಾದಿಗೆ ದಿಃ **14.05.1964** ರಲ್ಲಿ ಮಾರಾಟ ಮಾಡಿರುತ್ತಾರೆ. ನಾನು ನನ್ನ ಪಾಲಿನ ಆಸ್ತಿ ಮಾರಾಟ ಮಾಡಿದೆ ಎಂದರೆ ಸರಿಯಲ್ಲ. ಗೌಡಯ್ಯ ಮತ್ತು ಕರೀಗೌಡ ಮಕ್ಕಳು ತಮ್ಮ ಹೆಸರಿಗೆ ವಾರಸು ಖಾತೆ ಮಾಡಿಸಿದ್ದಾರೆ ಎಂದರೆ ಗೊತ್ತಿಲ್ಲ. ನಮ್ಮ ಒಪ್ಪಿಗೆ ಮೇರೆಗೆ ಆಗಿರುವುದಿಲ್ಲ. ನಿಪಿ. **14** ರಲ್ಲಿ ಬಿ.ಬಸವರಾಜು **2** ನೇ ಪ್ರತಿವಾದಿಯ ಮಗನ ಹೆಸರು ಇದೆ. **1** ಎಕರೆ **20** ಗುಂಟೆಗೆ ಖಾತೆ ಇದೆ ಎಂದರೆ ಮೋಸದಿಂದ ಮಾಡಿಸಿರುತ್ತಾರೆ. ಈ ಬಗ್ಗೆ ಎ.ಸಿ. ನ್ಯಾಯಾಲಯದಲ್ಲಿ ಪ್ರಕರಣ ಮಾಡಿಲ್ಲ. ಸದರಿ ಬಸವರಾಜನನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಪ್ರತಿವಾದಿ **13** ರಿಂದ **15** ಯಾವಗ ಜಮೀನು ಖರೀದಿಸಿದ್ದರು ಗೊತ್ತಿಲ್ಲ. ಅವರ ಕ್ರಯಪತ್ರ ನೋಡಿಲ್ಲ. **14** ನೇ ಪ್ರತಿವಾದಿ ಸರ್ವೇ ನಂ. **24/1** ರಲ್ಲಿ **17** ಗುಂಟೆ, **25/1** ರಲ್ಲಿ **12** ಗುಂಟೆ **2007** ರಲ್ಲಿ ನಿಂಗೇಗೌಡನ ಹೆಂಡತಿ ದೇವಮ್ಮನಿಂದ ಖರೀದಿ ಮಾಡಿರುತ್ತಾರೆ ಮತ್ತು ಸ್ವಾಧೀನ ಇದ್ದಾರೆ ಮತ್ತು ಭೂ ಪರಿವರ್ತನೆ ಮಾಡಿಸಿ ಲೇ ಔಟ್

ಮಾಡಿಸಿದ್ದಾರೆ ಎಂದರೆ ಗೊತ್ತಿಲ್ಲ. ಅವರ ಹೆಸರಿಗೆ ಖಾತೆಯಾಗಿದೆ ಎಂದರೆ ಗೊತ್ತಿಲ್ಲದೆ ಮಾಡಿಸಿರುತ್ತಾರೆ. ಸದರಿ ದೇವಮ್ಮನನ್ನು ಈ ದಾವೆಯಲ್ಲಿ ಸೇರಿಸಿಲ್ಲ. ದಾವಾ ಆಸ್ತಿಯ ಇತ್ತೀಚಿನ ಆರ್.ಟಿ.ಸಿ ನೋಡಿಲ್ಲ. ದಾವಾ ಆಸ್ತಿ ಇತ್ತೀಚೆಗೆ ಸ್ವಾಧೀನ ಮತ್ತು ಖಾತೆ ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಿಲ್ಲ. ನಾವು ಉದ್ದೇಶ ಪೂರ್ವಕವಾಗಿ ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. 15 ನೇ ಪ್ರತಿವಾದಿ ಸರ್ವೇ ನಂ. 24/1 ರಲ್ಲಿ 1 ಎಕರೆ 20 ಗುಂಟೆ ಬಿ.ಬಸವಾರಾಜುನಿಂದ ಖರೀದಿಸಿದ್ದಾರೆ ಎಂದರೆ ಮೋಸದಿಂದ ಖರೀದಿಸಿದ್ದಾರೆ ಎಂದು ಹೇಳುತ್ತಾರೆ. ಅದೇ ರೀತಿ ಖಾತೆ ಮಾಡಿಸಿರುತ್ತಾರೆ. ಸ್ವಾಧೀನ ಇದ್ದಾರೆ ಮತ್ತು ಭೂ ಪರಿವರ್ತನೆ ಮಾಡಿಸಿ ಲೇ ಔಟ್ ಮಾಡಿಸಿದ್ದಾರೆ ಎಂದರೆ ಗೊತ್ತಿಲ್ಲ. ನಾವು ಮಾರಾಟ ಮಾಡಿದಾಗ ಜಮೀನುಗಳ ಬೆಲೆ ಕಡಿಮೆ ಇತ್ತು. 2006 ರಲ್ಲಿ ಬೆಲೆ ಬಹಳ ಇತ್ತು. ಖರೀದಿ ದಾರರಿಂದ ಅಕ್ರಮ ಲಾಭ ಪಡೆಯಲು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಭಾಗ ಇಲ್ಲ ಎಂದರೆ ಸುಳ್ಳು. ಕರೀಗೌಡ ಮತ್ತು ಗೌಡಯ್ಯ ವಾರಸುದಾರರು ಮಾಡಿದ ಕ್ರಯಪತ್ರ ಕಾನೂನುಬದ್ಧವಾಗಿದ್ದು ನಮಗೆ ಬದ್ಧ ಪಡಿಸುತ್ತದೆ ಎಂದರೆ ಸರಿಯಲ್ಲ. ದಾವಾ ಮನೆಗಳು ನಮ್ಮ ಅಕ್ಕತಂಗಿಯರ ನಡುವೆ ಪಾಲು ಆಗಿದೆ ಎಂದರೆ ನಿಜ.

<u>ಪಾಟೀ ಸವಾಲುಃ 8 ನೇ ಪ್ರತಿವಾದಿ ಪರ ವಕೀಲರಿಂದಃ</u> ಮಧ್ಯಾಹ್ನ 03.00 ಗಂಟೆಗೆ ಮುಂದೂಡಲಾಯಿಗಿದೆ.

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ,**

ಸಹಿ/-

**ಹೆಚ್ಚುವರಿ ಲಘು ವ್ಯವಹಾರಗಳ ಮತ್ತು ಸಿವಿಲ್**
**ನ್ಯಾಯಾಧೀಶರು (ಹಿ.ವಿ.), ಮೈಸೂರು**

**ಸಾಕ್ಷಿಯನ್ನು ದಿಃ 17.11.2018 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 7 ರಿಂದ 12** ರನ್ನು ಕೂಗಿ ಕರೆಯಿಸಲಾಯಿತು. ಗೈರು ಹಾಜರಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ ಇದೆ,**

ಸಹಿ/-

**ಹೆಚ್ಚುವರಿ ಲಘು ವ್ಯವಹಾರಗಳ ಮತ್ತು ಸಿವಿಲ್ ನ್ಯಾಯಾಧೀಶರು (ಹಿ.ವಿ.), ಮೈಸೂರು**